# ಅತ್ಯಾಧುನಿಕ ಅಡುಗೆ ಮನೆಗೆ ಆಧುನಿಕ ಸಿಲಿಂಡರ್!

## ಇಂಡೇನ್ ಎಕ್ಸ್‌ಟ್ರಾಲೈಟ್; ನಯ, ಸುರಕ್ಷಿತ, ಸ್ಮಾರ್ಟ್

ಸ್ಮಾರ್ಟ್ ಕಿಚನ್; ಸ್ಮಾರ್ಟ್ ಎಲ್‌ಪಿಜಿ...! ಹೌದು, ಜಗತ್ತು ಆಧುನಿಕತೆಯತ್ತ ದಾಪುಗಾಲು ಹಾಕುತ್ತಿದೆ. ಮನೆ, ಕಚೇರಿ, ಆಸ್ಪತ್ರೆ, ಶಾಲೆ ಎಲ್ಲವೂ ಹೈಟೆಕ್ ಸ್ಪರ್ಶ ಪಡೆದು ಕಂಗೊಳಿಸುತ್ತಿವೆ. ಹಾಗಿದ್ದರೆ ಮನೆಯ ಅಡುಗೆ ಕೋಣೆ ಬರೀ ಸುಸಜ್ಜಿತವಾಗಿದ್ದರೆ ಸಾಕೆ? ಆಧುನಿಕ, ನಯವಾದ ಹೊಸ ಗುಣಲಕ್ಷಣಗಳನ್ನು ಹೊಂದಿರುವ ಅಡುಗೆ ಅನಿಲದ ಅವಶ್ಯಕತೆ ಇಲ್ಲವೇ? ಚಿಂತೆ ಬಿಡಿ. ಇಂಡಿಯನ್ ಆಯಿಲ್ ತನ್ನ ಇತ್ತೀಚಿನ ಆವೃತ್ತಿಯಾಗಿರುವ ಇಂಡೇನ್ ಎಕ್ಸ್‌ಟ್ರಾಲೈಟ್ ಸಿಲಿಂಡರ್ ಅನ್ನು ಗ್ರಾಹಕರಿಗೆ ಕೊಡುಗೆಯಾಗಿ ನೀಡುತ್ತಿದೆ. ಅಡುಗೆ ಮನೆ ಆಧುನಿಕತೆಯತ್ತ ಎಡತಾಕುತ್ತಿದೆ.

ಇದು ಮಾಮೂಲಿ ಸಿಲಿಂಡರ್‌ನಂತೆ ಅಲ್ಲ. ಈ ಎಲ್‌ಪಿಜಿ ಸಿಲಿಂಡರ್ ಮೂರು ಪದರಗಳೊಂದಿಗೆ ನಿರ್ಮಾಣವಾಗಿದೆ. ಬ್ಲೋಮೋಲ್ಡ್ ಹೈಡೆನ್ಸಿಟಿ ಪಾಲಿಥಿಲೀನ್ (HDPE) ಒಳಗಿನ ಪದರದಲ್ಲಿ ಅಳವಡಿಸಲಾಗಿದೆ. ಪಾಲಿಮರ್ ಸುತ್ತಿದ ಫೈಬರ್ ಗಾಜಿನ ಸಂಯೋಜಿತ ಪದರದಿಂದ ಮುಚ್ಚಲ್ಪಟ್ಟಿದೆ ಮತ್ತು ಎಚ್‌ಡಿಪಿಇ ಹೊರ ಜಾಕೆಟ್ ಅನ್ನು ಅಳವಡಿಸಲಾಗಿದ್ದು ಸಂಪೂರ್ಣ ಸುರಕ್ಷಿತವೂ ಆಗಿದೆ.

ಸದ್ಯ ಚಾಲ್ತಿಯಲ್ಲಿರುವ ಉಕ್ಕಿನ ಸಿಲಿಂಡರ್‌ಗಿಂತ ಎಕ್ಸ್‌ಟ್ರಾಲೈಟ್ ಸಿಲಿಂಡರ್ ಭಿನ್ನವಾಗಿದ್ದು, ಹಲವು ರೀತಿಯಲ್ಲಿ ಪ್ರಯೋಜನಕಾರಿಯಾಗಿದೆ. ಹಗುರವಾಗಿರುತ್ತವೆ: ಎಕ್ಸ್‌ಟ್ರಾಲೈಟ್ ಸಿಲಿಂಡರ್‌ನ ತೂಕವು ಅದರ ಉಕ್ಕಿನ ಪ್ರತಿರೂಪದ ಅರ್ಧದಷ್ಟು. ಸಿಲಿಂಡರ್ ಹಗುರವಾಗಿರುವುದರಿಂದ ಒಂದೆಡೆಯಿಂದ ಇನ್ನೊಂದೆಡೆ ಎತ್ತಿ ಇಡುವುದಕ್ಕೆ, ಸಾಗಾಣಿಕೆಗೆ ಸುಲಭ.

ಪರಿಶೀಲನೆಗೆ ಸಹಾಯಕ: ಸಿಲಿಂಡರ್ ಅರೆಪಾರದರ್ಶಕವಾಗಿದ್ದು, ಗ್ರಾಹಕರು ಅನಿಲದ ಮಟ್ಟದವನ್ನು ನಿಖರವಾಗಿ ಪರಿಶೀಲಿಸಲು ಸಹಾಯವಾಗುವಂತೆ ರೂಪುಗೊಂಡಿದೆ. ಇದರಿಂದಾಗಿ ಸಿಲಿಂಡರ್ ಯಾವಾಗ ಖಾಲಿಯಾಗಬಹುದು, ಮುಂದಿನ ಮರುಪೂರಣಕ್ಕೆ ಯಾವಾಗ ಸಜ್ಜಾಗಬೇಕು ಎಂಬುದನ್ನು ಪರಿಶೀಲಿಸಿ ಯೋಜಿಸಲು ಸಹಕಾರಿಯಾಗಿದೆ.

ತುಕ್ಕುಮುಕ್ತ: ಸಿಲಿಂಡರ್‌ಗೆ ತುಕ್ಕು ಹಿಡಿಯುವುದಿಲ್ಲ. ಅಲ್ಲದೆ ಇದರ ಮೇಲ್ಮೈಗಳಲ್ಲಿ ಕಲೆಗಳು, ಗುರುತು, ಗೀರುಗಳನ್ನು ಹೊಂದುವ ಸಾಧ್ಯತೆ ಕಡಿಮೆ. ಸ್ಫೋಟ ನಿರೋಧಕ: ಈ ಸಿಲಿಂಡರ್ ಸ್ಫೋಟಗೊಳ್ಳುವ ಸಂಭವ ಬಹಳ ಕಡಿಮೆ. ಹೀಗಾಗಿ ಇದರ ಬಳಕೆ ಅತ್ಯಂತ ಸುರಕ್ಷಿತ.




ಕಲಾತ್ಮಕತೆ: ಇದರ ವಿನ್ಯಾಸ ಕಲಾತ್ಮಕವಾಗಿದ್ದು, ಗ್ರಾಹಕರನ್ನು ಬೇಗನೆ ಸೆಳೆಯುವುದಲ್ಲದೆ, ಅಂದದ ಅಡುಗೆ ಮನೆಗೆ ಸೂಕ್ತವಾಗಿ ಸಾಥಿ ನೀಡುವಂತಿದೆ. ಈ ಎಕ್ಸ್‌ಟ್ರಾಲೈಟ್ ಸಿಲಿಂಡರ್‌ಗಳು ಎಲ್ಲಾ ಪ್ರಮುಖ ನಗರಗಳಲ್ಲಿನ ಆಯ್ದ ವಿತರಕರಲ್ಲಿ 5 ಕೆಜಿ ಮತ್ತು 10 ಕೆಜಿ ಗಾತ್ರಗಳಲ್ಲಿ ಲಭ್ಯ. 10 ಕೆಜಿ ಸಿಲಿಂಡರ್ ಅನ್ನು ದೇಶೀಯ ಸಬ್ಸಿಡಿ ರಹಿತ ವರ್ಗದ ಅಡಿಯಲ್ಲಿ ಮಾತ್ರ ಮಾರಾಟ ಮಾಡಲಾಗುತ್ತದೆ, ಆದರೆ 5 ಕೆಜಿ ಸಿಲಿಂಡರ್ ಅನ್ನು ದೇಶೀಯ ಸಬ್ಸಿಡಿ ರಹಿತ ವರ್ಗದ ಅಡಿಯಲ್ಲಿ ಮತ್ತು ವಿವಿಧ ಮಾರಾಟದ ಆಯ್ಕೆಗಳ ಮೂಲಕ ಮುಕ್ತವಾಗಿ ಎಲ್‌ಪಿಜಿ ವಿತರಕರ ಮೂಲಕ ಲಭ್ಯವಿರುವಂತೆ ನೋಡಿಕೊಳ್ಳಲಾಗಿದೆ.

ಸಂಪೂರ್ಣ ಸುರಕ್ಷಿತ, ಹಗುರ, ಅಂದದ ವಿನ್ಯಾಸದ ಪಾರದರ್ಶಕ ಗುಣವನ್ನು ಹೊಂದಿರುವ ಇಂಡೇನ್ ಎಕ್ಸ್‌ಟ್ರಾಲೈಟ್ ಸಿಲಿಂಡರ್ ನಿಮ್ಮ ಸುಂದರವಾದ ಮನೆಯ ಪಾಕಶಾಲೆಯ ಸಂಗಾತಿಯಾಗಬಾರದೇಕೆ?

ಸುಧಾ ಬ್ರ್ಯಾಂಡ್ ಪ್ರಸ್ತುತಿ

### ಪ್ರಶ್ನೋತ್ತರಗಳು

ಗ್ರಾಹಕರ ಸಂದೇಹಕ್ಕೆ ಕಂಪನಿಯ ಉತ್ತರಗಳು

◆ ಎಕ್ಸ್‌ಟ್ರಾಲೈಟ್ ಸಿಲಿಂಡರ್ ಎಂದರೇನು?

ಎಕ್ಸ್‌ಟ್ರಾಲೈಟ್ ಸಿಲಿಂಡರ್ ಎಂಬುದು ಬ್ಲೋ ಮೋಲ್ಡ್ HDPE ಒಳಗಿನ ಲೈನರ್‌ನಿಂದ ಮಾಡಲ್ಪಟ್ಟ ಮೂರುಪದರದ ಸಿಲಿಂಡರ್ ಆಗಿದೆ. ಅಲ್ಲದೆ ಇದು ಪಾಲಿಮರ್‌ಸುತ್ತಿದ ಫೈಬರ್ ಗಾಜು ಸಂಯೋಜಿತ ಪದರದಿಂದ ಮುಚ್ಚಲ್ಪಟ್ಟಿದೆ. ಇದಕ್ಕೆ ಎಚ್‌ಡಿಪಿಇ ಹೊರ ಜಾಕೆಟ್ ಅನ್ನು ಅಳವಡಿಸಲಾಗಿದೆ.

◆ ಇಂಡೇನ್ ಎಕ್ಸ್‌ಟ್ರಾಲೈಟ್ ಸಿಲಿಂಡರ್ ಎಲ್ಲಿ ಲಭ್ಯ?

ಪ್ರಸ್ತುತ ಎಲ್ಲಾ ಪ್ರಮುಖ ನಗರಗಳಲ್ಲಿನ ಆಯ್ದ ವಿತರಕರಲ್ಲಿ 5 ಕೆಜಿ ಮತ್ತು 10 ಕೆಜಿ ಗಾತ್ರಗಳಲ್ಲಿ ಇಂಡೇನ್ ಎಕ್ಸ್‌ಟ್ರಾಲೈಟ್ ಸಿಲಿಂಡರ್ ಲಭ್ಯ.

◆ ಇದರ ಸಿಲಿಂಡರ್‌ಗೆ ಭದ್ರತಾ ಠೇವಣಿ ಏನಾದರೂ ಇದೆಯೇ?

ಹೌದು. 10 ಕೆಜಿ ಸಿಲಿಂಡರ್‌ಗೆ ₹ 3,000 ಆಗಿದ್ದು, ಸಬ್ಸಿಡಿ ರಹಿತ ವರ್ಗಕ್ಕೆ ಬರುತ್ತದೆ. ಇದೇ ರೀತಿ 5 ಕೆಜಿ ಸಿಲಿಂಡರ್‌ಗೆ ಭದ್ರತಾ ಠೇವಣಿ ₹ 2,200 ಆಗಿರುತ್ತದೆ.

◆ ಗ್ರಾಹಕ ತನ್ನ ಅಸ್ತಿತ್ವದಲ್ಲಿರುವ ಸ್ಟೀಲ್ ಸಿಲಿಂಡರ್ ಅನ್ನು ಎಕ್ಸ್‌ಟ್ರಾಲೈಟ್ ಸಿಲಿಂಡರ್‌ನೊಂದಿಗೆ ಬದಲಾಯಿಸಬಹುದೇ?

ಹೌದು, ಇಂಡೇನ್ ಗ್ರಾಹಕರು ತಮ್ಮ ಅಸ್ತಿತ್ವದಲ್ಲಿರುವ ಸ್ಟೀಲ್ ಸಿಲಿಂಡರ್ ಅನ್ನು ಅತ್ಯಾಧುನಿಕ ಎಕ್ಸ್‌ಟ್ರಾಲೈಟ್ ಸಿಲಿಂಡರ್‌ನೊಂದಿಗೆ ಭದ್ರತಾ ಠೇವಣಿಯಲ್ಲಿನ ವ್ಯತ್ಯಾಸವನ್ನು ಪಾವತಿಸುವ ಮೂಲಕ ಬದಲಾಯಿಸಿಕೊಳ್ಳುವ ಅವಕಾಶವಿದೆ.

◆ ಇಂಡೇನ್ ಎಕ್ಸ್‌ಟ್ರಾಲೈಟ್ ಸಿಲಿಂಡರ್ ಅನ್ನು ಮನೆಗೆ ತಲುಪಿಸಲಾಗುತ್ತದೆಯೇ?

ಹೌದು, ಎಕ್ಸ್‌ಟ್ರಾಲೈಟ್ ಸಿಲಿಂಡರ್ ಅನ್ನು ಇಂಡೇನ್ ವಿತರಕರ ಮೂಲಕ ಅಸ್ತಿತ್ವದಲ್ಲಿರುವ ಗ್ಯಾಸ್ ಸಿಲಿಂಡರ್‌ನಂತೆಯೇ ಮನೆ ಮನೆಗೆ ತಲುಪಿಸಲಾಗುತ್ತದೆ.

◆ ಇಂಡೇನ್ ಎಕ್ಸ್‌ಟ್ರಾಲೈಟ್ ಸಿಲಿಂಡರ್ ಉಚಿತ ವ್ಯಾಪಾರ LPG (FTL) ಆಗಿ ಲಭ್ಯವಿದೆಯೇ?

5 ಕೆಜಿ ಎಕ್ಸ್‌ಟ್ರಾಲೈಟ್ ಸಿಲಿಂಡರ್ FTL ವರ್ಗದಲ್ಲಿಯೂ ಲಭ್ಯವಿದೆ. 5 ಕೆಜಿ ಎಕ್ಸ್‌ಟ್ರಾಲೈಟ್ FTL ಸಿಲಿಂಡರ್‌ನ ಪ್ರಸ್ತುತ ಬೆಲೆ ಜಿಎಸ್‌ಟಿ ಸೇರಿ ₹ 2,537 ಆಗಿರುತ್ತದೆ. ಮರುಪೂರಣದ ವೆಚ್ಚವು ಸ್ಥಳವನ್ನು ಅವಲಂಬಿಸಿ ನಿಯತಕಾಲಿಕವಾಗಿ ಬದಲಾಗುತ್ತದೆ.

FTL ಸಂಪರ್ಕದ ಕುರಿತು ಹೆಚ್ಚಿನ ಮಾಹಿತಿಗಾಗಿ, ಲಿಂಕ್/pages/chhotugas cylinder ಅನ್ನು ನೋಡಿ.